SC 6/2024
PW.10

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಉಡುಪಿ ಜಿಲ್ಲೆ , ಉಡುಪಿ.**

**ಸೆಷನ್ಸ್ ಕೇಸ್ ನಂಃ 6/2024** **ಫ್ರಾ.ಸಾ.10**
**ಚಾ.ಸಾ.12**

| | | |
|---|---|---|
| ಸಾಕ್ಷಿದಾರರ ಹೆಸರು | - | ಫರಾನಾ |
| ಗಂಡನ ಹೆಸರು | - | ಜಕ್ರಿಯಾ |
| ವಯಸ್ಸು | - | 32 ವರ್ಷ |
| ಉದ್ಯೋಗ | - | ಗೃಹಿಣಿ |
| ವಿಳಾಸ | - | ನೇಜಾರು. |

ದಿನಾಂಕಃ 15.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ**

1. ತೃಪ್ತಿ ಲೇಔಟ್ ನಲ್ಲಿರುವ ನಮ್ಮ ಮನೆ ಮುಖ್ಯ ರಸ್ತೆಗೆ ಮುಖ ಮಾಡಿ ಇದೆ. ನಮ್ಮ ಮನೆಯ ಪಕ್ಕ ಮುನೀರ್ ಎಂಬವರ ಮನೆ ಇದೆ. ಮುನೀರ್ ರವರ ಮನೆಗೆ ತಾಗಿ ತೃಪ್ತಿ ಲೇಔಟ್ ಗೆ ಹೋಗುವ ಅಡ್ಡ ರಸ್ತೆ ಇದೆ. ಅಡ್ಡ ರಸ್ತೆಯ ಮತ್ತೊಂದು ಬದಿಯಲ್ಲಿ ಹಸೀನಾರವರ ಮನೆ ಇದೆ. ಹಸೀನಾರವರ ಮನೆಯ ಪಕ್ಕದಲ್ಲಿ ಚಾಸಾ8 ಅಯುಬ್ ರವರ ಮನೆ ಇದೆ. ಸಾಕ್ಷಿ ಎರಡು ಭಾವ ಚಿತ್ರಗಳನ್ನು ನೋಡಿ ಅದರಲ್ಲಿ ಕಾಣುವ ತನ್ನ ಮನೆ, ಮುನೀರ್ ರವರ ಮನೆ ಮತ್ತು ಮುನೀರ್ ರವರ ಮನೆಯ ಪಕ್ಕ ಕಾಣುವ ಮನೆ ಹಸೀನಾರವರ ಮನೆ ಎಂದು ಗುರುತಿಸಿರುತ್ತಾರೆ. ಸಾಕ್ಷಿಯ ಮನೆಯ ಭಾವಚಿತ್ರವನ್ನು ನಿಪಿ-60 ಎಂದು ಗುರುತಿಸಲಾಯಿತು. ಮುನೀರ್ ಮತ್ತು ಹಸೀನಾರವರ ಮನೆಗಳು ಕಾಣುವ ಭಾವಚಿತ್ರವನ್ನು ನಿಪಿ-61 ಎಂದು ಗುರುತಿಸಲಾಯಿತು.

2. ನಮ್ಮ ಮನೆಯಲ್ಲಿ ನಾನು, ನನ್ನ ಗಂಡ, ಇಬ್ಬರು ಮಕ್ಕಳು ಮತ್ತು ಅತ್ತೆ, ಮಾವ ವಾಸ ಮಾಡುತ್ತೇವೆ. ನನ್ನ ಗಂಡ ವ್ಯಾಪಾರ ಮಾಡುತ್ತಾರೆ. ಹಸೀನಾರವರ ಗಂಡ ಸೌದಿ ಅರೇಬಿಯಾದಲ್ಲಿ ಇರುತ್ತಾರೆ. ಹಸೀನಾರವರ ದೊಡ್ಡ ಮಗ ಬೆಂಗಳೂರಿನಲ್ಲಿ ಮತ್ತು ಇಬ್ಬರು ಹೆಣ್ಣು ಮಕ್ಕಳು ಮಂಗಳೂರಿನಲ್ಲಿ ವಾಸವಿದ್ದು ರಜೆ ಇರುವಾಗ ಮನೆಗೆ ಬಂದು ಹೋಗುತ್ತಿದ್ದರು. ಮನೆಯಲ್ಲಿ ಹಸೀನಾ ಮತ್ತು ಅವರ ಚಿಕ್ಕ ಮಗ ಆಸೀಮ್ ಇರುತ್ತಿದ್ದರು. ಹಸೀನಾರವರ ಅತ್ತೆ ಹಾಜಿರಾ ಅವರ ಮನೆಗೆ ಬಂದು ಹೋಗುತ್ತಿದ್ದರು.

3. ದಿನಾಂಕ 12-11-2023 ರಂದು ಹಸೀನಾ, ಇಬ್ಬರು ಹೆಣ್ಣು ಮಕ್ಕಳ ಮತ್ತು ಚಿಕ್ಕ ಮಗನ ಕೊಲೆ ಆಗಿರುತ್ತದೆ. ಆ ದಿನ ಬೆಳಿಗ್ಗೆ 8-30 ರ ಸಮಯದಲ್ಲಿ ನನ್ನ ಗಂಡ ಮತ್ತು ಮಾವ ಮನೆಯಿಂದ ಹೊರಗೆ ಹೋಗಿದ್ದರು. ಮನೆಯಲ್ಲಿ ನಾನು, ನನ್ನ ಅತ್ತೆ ಮತ್ತು ಮಕ್ಕಳು ಇದ್ದೆವು. ಬೆಳಿಗ್ಗೆ ಸುಮಾರು 8-50 ರ ಸಮಯದಲ್ಲಿ ಹಸೀನಾರವರ ಮನೆಯಿಂದ ಚೀರಾಟದ ಶಬ್ದ ನನಗೆ ಮತ್ತು ನನ್ನ ಅತ್ತೆಗೆ ಕೇಳಿರುತ್ತದೆ. ಆಗ ನಾವು ಹಸೀನಾರವರ ಅತ್ತೆ ಚೀರಾಡುತ್ತಿರಬಹುದು ಎಂದು ಸುಮ್ಮನಾದೆವು. ನಾವು ನಮ್ಮಷ್ಟಕ್ಕೆ ಮನೆಗೆಲಸ ಮಾಡಿಕೊಂಡು ಇದ್ದೆವು. ಸುಮಾರು ಬೆಳಿಗ್ಗೆ 9-10 ರ ಸಮಯದಲ್ಲಿ ಹಸೀನಾರವರ ಮನೆಯಿಂದ ಮತ್ತೆ ಚೀರಾಟದ ಶಬ್ದ ಕೇಳಿಸಿತು. ಆಗ ನಾನು ಮತ್ತು ನನ್ನ ಅತ್ತೆ ನಮ್ಮ ಮನೆಯ ಹಿಂಬದಿಗೆ ಹೋಗಿ ನೋಡಿದಾಗ ಆಯುಬ್ ರವರ ಹೆಂಡತಿ ಶಾಹೀನ್ ಬೀಬಿ ಮತ್ತು ಆಕೆಯ ಮಗಳು ಐಫಾ, ಹಸೀನಾರವರ ಮನೆಯ ಮುಂದೆ ಚೀರಾಡುತ್ತಿದ್ದರು.

4. ಆ ಸಮಯದಲ್ಲಿ ನಮಗೆ ಏನು ಎಂದು ಅರ್ಥ ಆಗಲಿಲ್ಲ. ಆಗ ನಾನು ಮತ್ತು ಅತ್ತೆ ನಮ್ಮ ಮನೆಯ ಬಾಗಿಲನ್ನು ಮುಚ್ಚಿ ಹಸೀನಾರವರ ಮನೆಯ ಬಳಿ ಹೋದೆವು. ಆಗ ಅಲ್ಲಿ

ಶಾಹೀನ್ ಬೀಬಿ ಮತ್ತು ಐಫಾ ಅಳುತ್ತಿದ್ದರು. ಮನೆಯ ಅಂಗಳದಲ್ಲಿ ಆಸೀಮ್ ನ ಸೈಕಲ್ ಬಿದ್ದಿತ್ತು. ನಾವು ಐಫಾಳನ್ನು ವಿಚಾರಿಸಿದಾಗ ಆಕೆ ಆಸೀಮ್ ನ ಕೊಲೆ ಆಗಿದೆ ಎಂದು ಹೇಳಿದಳು. ನಾವು ಹಸೀನಾರವರ ಮನೆಯ ಬಾಗಿಲನ್ನು ಸ್ವಲ್ಪ ದೂಡಿ ನೋಡಿದಾಗ ಆಸೀಮ್ ಗೆ ಗಾಯಗಳಾಗಿ ರಕ್ತದ ಮಡುವಿನಲ್ಲಿ ಬಿದ್ದಿದ್ದನು. ಸದ್ರಿ ಮನೆಯ ಬೇರೆ ಯಾರೂ ಕಾಣಿಸಲಿಲ್ಲ. ಅದನ್ನು ನೋಡಿ ಭಯವಾಗಿ ನಾವು ಮನೆಯಿಂದ ಹೊರಗೆ ಬಂದೆವು. ಐಫಾಳು ಐನಾಜ್ ಮತ್ತು ಅಫನಾನ್ ಗೆ ಕರೆ ಮಾಡಿದಳು, ಆದರೆ ಅವರು ಕರೆ ಸ್ವೀಕರಿಸಲಿಲ್ಲ. ಅದಕ್ಕೆ ಆಕೆ ತನ್ನ ಚಿಕ್ಕಪ್ಪ ಮತ್ತು ಅಪ್ಪನಿಗೆ ಕರೆ ಮಾಡಿದ್ದಾಳೆ. ಆ ನಂತರ ಸ್ಥಳಕ್ಕೆ ನನ್ನ ಗಂಡ, ಅಶ್ರಫ್, ಆಯುಬ್ ಬಂದರು. ಆ ಸಮಯಕ್ಕೆ ಪೋಲಿಸರು ಸಹಾ ಬಂದಿದ್ದರು. ನಂತರ ನೋಡಲಾಗಿ, ಹಸೀನಾ ಡೈನಿಂಗ್ ಹಾಲ್ ನಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿದ್ದರು, ಪ್ಯಾಸೇಜಿನಲ್ಲಿ ಐನಾಜ್ ರಕ್ತದ ಮಡುವಿನಲ್ಲಿ ಬಿದ್ದಿದ್ದರು, ಬೆಡ್ ರೂಮಿನ ಬೆಡ್ ಮೇಲೆ ಅಫನಾನ್ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಅವರಿಗೆ ಹರಿತವಾದ ಆಯುಧದಿಂದ ಹಲ್ಲೆ ಮಾಡಿದ ಬಗ್ಗೆ ಕಂಡುಬಂತು. ಮನೆಯ ವಾಶ್ ರೂಮಿನಿಂದ ಶಬ್ದ ಕೇಳಿಸಿತು. ಅದಕ್ಕೆ ಪೋಲಿಸರು ಮತ್ತು ಇತರರು ಸೇರಿ ವಾಶ್ ರೂಮಿನ ಬಾಗಿಲನ್ನು ಬಲವಾಗಿ ತಳ್ಳಿ ನೋಡಿದಾಗ ವಾಶ್ ರೂಮಿನಲ್ಲಿ ಅಜ್ಜಿ ಹಾಜಿರಾಗೆ ಗಾಯ ಆಗಿ ರಕ್ತ ಬರುತ್ತಿತ್ತು. ಆಕೆಯನ್ನು ಕುರ್ಚಿಯಲ್ಲಿ ಕುಳ್ಳಿರಿಸಿ ನಂತರ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು.

5. ಐಫಾಳನ್ನು ವಿಚಾರಿಸಿದಾಗ ಆಕೆ ಹಸೀನಾರವರ ಚೀರಾಟದ ಶಬ್ದ ಕೇಳಿಸಿತು, ಅದಕ್ಕೆ ನಾವು ಅಜ್ಜಿ ಹಾಜಿರ ಚೀರಾಡಿಬಹುದು ಎಂದು ಗ್ರಹಿಸಿದ್ದೆವು, ಅಫನಾನ್ ಮತ್ತು ಐನಾಜ್‌ಗೆ ಕರೆ ಮಾಡಿದರೆ ಅವರು ಕರೆ ಸ್ವೀಕರಿಸಲಿಲ್ಲ, ನಂತರ ನಾನು ಹೊರಗೆ ಬಂದು ನೋಡಿದಾಗ ಹಸೀನಾ ರವರ ಮನೆಯಿಂದ ಒಬ್ಬ ದೃಢಕಾಯದ ವ್ಯಕ್ತಿ ಕೈಯಲ್ಲಿ ಕಪ್ಪು ಬಣ್ಣದ ಲ್ಯಾಪ್ ಟಾಪ್ ಬ್ಯಾಗ್

ಹಿಡಿದುಕೊಂಡು ಮನೆಯ ಒಳಗಿನಿಂದ ಹೊರಗೆ ಬಂದು ಗೇಟ್ ಮೂಲಕ ಮುಖ್ಯ ರಸ್ತೆಯ ಕಡೆಗೆ ಹೋಗಿರುತ್ತಾನೆ ಎಂದು ತಿಳಿಸಿದಳು. ನಂತರ ಪುನಃ ನಾನು ಅಫನಾನ್ ಮತ್ತು ಐನಾಜ್ ಗೆ ಕರೆ ಮಾಡಿದೆ, ಆದರೆ ಅವರು ಕರೆ ಸ್ವೀಕರಿಸಲಿಲ್ಲ ಎಂದು ತಿಳಿಸಿದಳು. ನಂತರ ಹಸೀನಾರವರ ಮನೆಗೆ ಹೋಗಿ ಮುಖ್ಯ ಬಾಗಿಲು ತೆರೆದು ನೋಡಿದಾಗ ಆಸೀಮ್ ರಕ್ತದ ಮಡುವಿನಲ್ಲಿ ಬಿದ್ದಿದ್ದನ್ನು ನೋಡಿ ನಾವು ಚೀರಾಡಿದ್ದೇವೆ ಎಂದು ತಿಳಿಸಿದಳು. ಹಸೀನಾರವರ ಮನೆಯ ಒಳಗಿನಿಂದ ಹೊರಗೆ ಬಂದು ಕಪ್ಪು ಬ್ಯಾಗ್ ಹಿಡಿದುಕೊಂಡು ಮುಖ್ಯ ರಸ್ತೆ ಕಡೆಗೆ ಹೋದ ವ್ಯಕ್ತಿಯೇ ಕೊಲೆ ಮಾಡಿರಬಹುದು ಎಂದು ನಮಗೆ ಅನಿಸಿತು. ಹಸೀನಾರವರು ಘಟನೆಯ ನಾಲ್ಕೈದು ದಿವಸಗಳ ಹಿಂದೆ ನಮ್ಮ ಮನೆಗೆ ಬಂದು ಸ್ವಲ್ಪ ಸಮಯ ಇದ್ದು ಹೋಗಿರುತ್ತಾರೆ. ಆ ಸಮಯದಲ್ಲಿ ಹಸೀನಾರವರು ಸಾಮಾನ್ಯವಾಗಿಯೇ ಇದ್ದರು, ಅವರಲ್ಲಿ ಯಾವುದೇ ಸಮಸ್ಯೆ ಕಂಡುಬರಲಿಲ್ಲ. ಈ ಪ್ರಕರಣದಲ್ಲಿ ಪೊಲೀಸರು ನನ್ನನ್ನು ಎರಡು ಬಾರಿ ವಿಚಾರಿಸಿರುತ್ತಾರೆ.

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಆರ್.ಪಿ.(LADC) ವಕೀಲರಿಂದ:</u>**

1. ನನಗೆ ಇಬ್ಬರು ಮಕ್ಕಳು. ಈಗ ಒಬ್ಬಳಿಗೆ 9 ವರ್ಷ, ಇನ್ನೊಬ್ಬಳಿಗೆ 7 ವರ್ಷ. ಅವರು ಹೂಡೆಯಲ್ಲಿರುವ ಸಾಲಿಯತ್ ಇಂಗ್ಲೀಷ್ ಮೀಡಿಯಂ ಸ್ಕೂಲ್ ಗೆ ಹೋಗುತ್ತಾರೆ. ನಮ್ಮ ಮನೆಯ ಮುಖ್ಯ ಬಾಗಿಲು ಪೂರ್ವಕ್ಕೆ ಇರಬಹುದು. ಸಂತೆಕಟ್ಟೆಯಿಂದ ಕೆಮ್ಮಣ್ಣಿಗೆ ಹೋಗುವ ರಸ್ತೆಯ ಎಡ ಬದಿಯಲ್ಲಿ ನಮ್ಮ ಮನೆ ಬರುತ್ತದೆ. ನಮ್ಮ ಮನೆಯ ಬಲ ಬದಿಯಲ್ಲಿ ಮುನೀರ್ ರವರ ಮನೆ ಇರುತ್ತದೆ. ಸಂತೆಕಟ್ಟೆಯಿಂದ ಕೆಮ್ಮಣ್ಣಿಗೆ ಹೋಗುವ ರಸ್ತೆಯ ಯಾವ ಬದಿಯಲ್ಲಿ ಹಸೀನಾರವರ ಮನೆ ಬರುತ್ತದೆ ಹೇಳಲು ಆಗುವುದಿಲ್ಲ. ನಮ್ಮ ಮನೆಯಿಂದ ಮುಖ್ಯ ರಸ್ತೆಗೆ ಬಂದು ಅಲ್ಲಿಂದ ಅಡ್ಡ ರಸ್ತೆ ಮೂಲಕ ಹಸೀನಾರವರ ಮನೆಗೆ ಹೋಗುತ್ತೇವೆ. ಆ ರೀತಿ ಹಸೀನಾರವರ

ಮನೆಗೆ ಸುಮಾರು 50 ಮೀ. ಆಗುತ್ತದೆ, ಆದರೆ ನಿಖರವಾಗಿ ಹೇಳಲು ಆಗುವುದಿಲ್ಲ. ಹಸೀನಾ ಮತ್ತು ಚಾಸಾ1 ರವರ ಮನೆಯ ನಡುವೆ ಕಂಪೌಂಡ್ ಇದ್ದು ಮನೆಗಳ ನಡುವೆ ಹೆಚ್ಚಿನ ಅಂತರ ಇರುವುದಿಲ್ಲ. ಹಸೀನಾ ಮತ್ತು ಚಾಸಾ1 ರವರ ಮನೆಯ ನಡುವೆ ಇರುವ ಕಂಪೌಂಡ್ ಬಳಿ ಹಸೀನಾರವರ ಕಂಪೌಂಡ್ ಬದಿಯಲ್ಲಿ ಗಿಡ, ಮರಗಳು ಇರುತ್ತವೆ. ಸದ್ರಿ ಮರಗಳು ದೊಡ್ಡ ಮರಗಳು ಆಗಿರುವುದಿಲ್ಲ. ಚಿಕ್ಕ ಕ್ರಿಸ್‌ಮಸ್ ಟ್ರೀ ರೀತಿಯ ಮರ ಇರುತ್ತವೆ. ನಮ್ಮ ಮನೆಯಿಂದ ಹಸೀನಾರವರ ಮನೆಗೆ ಕಾಲು ನಡಿಗೆಯಲ್ಲಿ ಎರಡು ಮೂರು ನಿಮಿಷದಲ್ಲಿ ಹೋಗಬಹುದು. ನಮ್ಮ ಮನೆಯ ಮುಂದೆ ಮತ್ತು ಹಿಂದೆ ನಿಂತರೆ ಹಸೀನಾರವರ ಮನೆ ಕಾಣುತ್ತದೆ. ನಮ್ಮ ಮನೆಯ ಮುಂದೆ ನಿಂತರೆ ಹಸೀನಾರವರ ಮನೆ ಕಾಣುವುದಿಲ್ಲ ಎಂದರೆ ಸರಿಯಲ್ಲ.

2. ಕಿರುಚಾಟದ ಶಬ್ದ ಹಸೀನಾರವರ ಮನೆಯಿಂದಲೇ ಬಂದಿದೆ ಎಂದು ಗೊತ್ತಾಯಿತು, ಆದರೆ ಅವರ ಅಜ್ಜಿ ಕಿರುಚುತ್ತಿದ್ದಾರೆ ಎಂದು ಸುಮ್ಮನಾದೆವು. ಆ ಸಮಯದಲ್ಲಿ ನಾನು ಅಡುಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಅತ್ತೆ ಮನೆಯ ಹೊರಗೆ ಕೆಲಸ ಮಾಡುತ್ತಿದ್ದರು. ನಾನು ಅಡುಗೆ ಮಾಡುವಾಗ ವಾಚ್ ಕಟ್ಟುವುದಿಲ್ಲ. ಮೊಬೈಲಿನಲ್ಲಿ ಸಮಯ ನೋಡುತ್ತೇನೆ. ನಾನು ಮತ್ತು ನನ್ನ ಅತ್ತೆ ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಚಾಸಾ1 ಮತ್ತು 2 ಇದ್ದರು. ನಾವು ಹೋದಾಗ ಮನೆಯ ಬಾಗಿಲು ಸ್ವಲ್ಪ ತೆರೆದಿತ್ತು. ನಾವು ಬಾಗಿಲ ಹತ್ತಿರ ನಿಂತು ಆಸೀಮ್ ನನ್ನು ಮಾತ್ರ ನೋಡಿದೆವು, ಮನೆಯ ಒಳಗೆ ಹೋಗಿಲ್ಲ. ನಂತರ ಸ್ಥಳಕ್ಕೆ ನನ್ನ ಗಂಡ ಜಕ್ರಿಯಾ, ಚಾಸಾ6 ಅಶ್ರಫ್ ಮತ್ತು ಚಾಸಾ8 ಅಯುಬ್ ಬಂದಿರುತ್ತಾರೆ. ಸ್ವಲ್ಪ ಸಮಯದ ನಂತರ ಪೋಲಿಸರು ಬಂದಿರುತ್ತಾರೆ. ಪೋಲಿಸರಿಗೆ ಯಾರು ಮಾಹಿತಿ ನೀಡಿದ್ದಾರೆ ಗೊತ್ತಿಲ್ಲ. ಸ್ಥಳದಲ್ಲಿ ಚಾಸಾ1 ಮತ್ತು 2 ಅಳುತ್ತಾ ಗಾಬರಿಯಲ್ಲಿದ್ದರು, ಅವರು ಗಾಬರಿಯಲ್ಲಿ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ.

ನಾನು ಅವರಿಗೆ ಉಪಚರಿಸಲಿಲ್ಲ. ಆದರೆ ಸ್ವಲ್ಪ ಸಮಯದ ನಂತರ ಅವರನ್ನು ವಿಚಾರಿಸಿರುತ್ತೇನೆ. ಪೋಲಿಸರು ಸ್ಥಳಕ್ಕೆ ಬಂದಾಗ ಎಷ್ಟು ಸಮಯ ಆಗಿತ್ತು ಗೊತ್ತಿಲ್ಲ. ಪೋಲಿಸರು ಸ್ಥಳದಲ್ಲಿ ಯಾರನ್ನು ವಿಚಾರಿಸಿರುತ್ತಾರೆ ಗೊತ್ತಿಲ್ಲ, ಪೋಲಿಸರು ಸ್ಥಳಕ್ಕೆ ಬರುವ ಪೂರ್ವದಲ್ಲಿ ನಾವು ನಮ್ಮ ಮನೆಗೆ ಬಂದಿರುತ್ತೇವೆ. ನನ್ನ ಗಂಡ ಜಕ್ರಿಯಾಗೆ ಕರೆ ಮಾಡಿ ವಿಷಯ ತಿಳಿಸಿರುತ್ತೇನೆ. ಸ್ಥಳದಲ್ಲಿಯೂ ಸಹಾ ಅವರಿಗೆ ವಿಷಯ ತಿಳಿಸಿರುತ್ತೇನೆ. ಪೋಲಿಸರ ಜೊತೆ ನಾನು ಮನೆಯ ಒಳಗೆ ಹೋಗಿಲ್ಲ. ಪೋಲಿಸರು ಬಂದ ನಂತರ ನಾನು ಮನೆಯ ಒಳಗೆ ಹೋಗಿಲ್ಲ.

3. ನಂತರ ಪೋಲಿಸರು ಸಹಾ ಬಂದರು, ಒಳಗೆ ಹೋಗಿ ನೋಡಿದಾಗ ಡೈನಿಂಗ್ ಹಾಲ್ ನಲ್ಲಿ ಹಸೀನಾ, ಡೈನಿಂಗ್ ಹಾಲ್ ನ ಪ್ಯಾಸೇಜ್ ನಲ್ಲಿ ಐನಾಜ್ ಮತ್ತು ಡೈನಿಂಗ್ ಹಾಲ್ ನ ಪಕ್ಕದ ಬೆಡ್ ನಲ್ಲಿ ಅಫನಾನ್ ರಕ್ತದ ಮಡುವಿನಲ್ಲಿ ಬಿದ್ದಿದ್ದರು, ಎಲ್ಲರ ಮೈಮೇಲೂ ಯಾವುದೋ ಹರಿತವಾದ ಆಯುಧದಿಂದ ಚುಚ್ಚಿದ ಆಳವಾದ ಗಾಯಗಳು ಕಂಡುಬರುತ್ತಿದ್ದವು ಎಂದು ಪೋಲಿಸರಿಗೆ ಹೇಳಿದ್ದೀರಾ ಎಂದರೆ ಸಾಕ್ಷಿ ಈಗ ನೆನಪಿಲ್ಲ ಎನ್ನುತ್ತಾರೆ. ಪೋಲಿಸರಿಗೆ ಮನೆಯ ಹೊರಗಿನಿಂದ ನೋಡಿದ ವಿಚಾರವನ್ನು ತಿಳಿಸಿರುತ್ತೇನೆ. ಅಜ್ಜಿ ಹಾಜಿರಾರವರನ್ನು ಮನೆಯಿಂದ ಹೊರಕ್ಕೆ ಎಷ್ಟು ಸಮಯಕ್ಕೆ ಮತ್ತು ಯಾರು ತಂದಿದ್ದಾರೆ ನಾನು ನೋಡಿಲ್ಲ. ನಾನು ಸ್ಥಳದಲ್ಲಿ ಸುಮಾರು 10 ರಿಂದ 15 ನಿಮಿಷ ಇದ್ದೆನು. ಸ್ಥಳದಿಂದ ಮನೆಗೆ ವಾಪಸ್ಸು ಹೋಗುವ ಸಮಯದಲ್ಲಿ ಸ್ಥಳದಲ್ಲಿ ಸುಮಾರು 20 ರಿಂದ 25 ಜನರು ಸೇರಿದ್ದರು. ನಾನು ವಾಪಸ್ಸು ಮನೆಗೆ ಹೋಗುವ ಸಮಯದವರೆಗೆ ಚಾಸಾ1 ಗಾಬರಿಯಿಂದ ಕೂಗುತ್ತಿದ್ದಳು. ಘಟನೆ ಬಗ್ಗೆ ನನಗೆ ಚಾಸಾ1 ಯಾವುದೇ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ತಕ್ಷೀರು ಸ್ಥಳಕ್ಕೆ ಹೋಗಿಲ್ಲ ಮತ್ತು ಯಾವುದೇ ವಿಚಾರವನ್ನು ಗಮನಿಸಿಲ್ಲ ಎಂದರೆ ಸರಿಯಲ್ಲ.

4. ಘಟನೆಯ 15 ದಿವಸಗಳ ಪೂರ್ವದಲ್ಲಿ ನಾನು ಹಸೀನಾರವರ ಮನೆಗೆ ಹೋಗಿದ್ದೆ. ಹಸೀನಾ ಮತ್ತು ಆಕೆಯ ಮಕ್ಕಳ ವೈಯಕ್ತಿಕ ಜೀವನದ ಬಗ್ಗೆ ಅಷ್ಟೇನೂ ಮಾಹಿತಿ ಇಲ್ಲ, ಸ್ವಲ್ಪ ಮಾಹಿತಿ ಇದೆ. ಹಸೀನಾ ಲೇವಾದೇವಿ ವ್ಯವಹಾರ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಆಕೆಯ ಮನೆಗೆ ಬೇರೆ ಬೇರೆ ಜನರು ಬಂದು ಹೋಗುತ್ತಿದ್ದರು ಎಂದರೆ ಸಾಕ್ಷಿ ಅವರ ಕುಟುಂಬದವರು ಬಂದು ಹೋಗುತ್ತಿದ್ದರು ಎನ್ನುತ್ತಾರೆ. ಹಸೀನಾರವರ ಮನೆಗೆ ಬರುವ ಎಲ್ಲರ ಪರಿಚಯ ಇರುವುದಿಲ್ಲ, ಆದರೆ ಅವರ ಸಂಬಂಧಿಕರ ಪರಿಚಯ ಇರುತ್ತದೆ. ಆಕೆ ಲೇವಾದೇವಿ ವ್ಯವಹಾರ ಮಾಡುತ್ತಿದ್ದ ಬಗ್ಗೆ ಮತ್ತು ವ್ಯವಹಾರದಲ್ಲಿ ಆಕೆಗೆ ಸಾಕಷ್ಟು ಜನರ ವಿರೋಧ ಇದ್ದ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ.

5. ಹಸೀನಾ ನಮ್ಮ ಬಳಿ ತನ್ನ ಇಬ್ಬರು ಹೆಣ್ಣು ಮಕ್ಕಳ ಮದುವೆ ಆರೇಳು ತಿಂಗಳಲ್ಲಿ ಮಾಡಬೇಕು ಎಂದು ಹೇಳುತ್ತಿದ್ದಳು. ಘಟನೆಯ ಒಂದು ತಿಂಗಳ ಪೂರ್ವದಲ್ಲಿ ಆ ರೀತಿ ಹೇಳಿರುತ್ತಾಳೆ. ಈ ವಿಚಾರವನ್ನು ಪೋಲಿಸರ ಬಳಿ ಹೇಳಿದ್ದೇನೋ, ಇಲ್ಲವೋ ನೆನಪಿಲ್ಲ. ಹಸೀನಾ ರವರಿಗೆ ತನ್ನ ಹೆಣ್ಣು ಮಕ್ಕಳ ಮದುವೆ ಯಾವ ಹುಡುಗರ ಜೊತೆ ಮಾಡುತ್ತೀರಾ ಎಂದು ನಾನು ಕೇಳಿಲ್ಲ. ಅಫನಾನ್ ಮತ್ತು ಐನಾಜ್ ರವರು ಇಬಾದ್ ಮತ್ತು ಅರ್ಶದ್ ಗೆ ಮದುವೆ ಆಗುವವರು ಇದ್ದರು, ಆದರೆ ಇಬಾದ್ ಮತ್ತು ಅರ್ಶದ್ ಗೆ ಸರಿಯಾದ ಕೆಲಸ ಇರಲಿಲ್ಲ, ಈ ಕಾರಣಕ್ಕೆ ಹಸೀನಾ ಮತ್ತು ಆಕೆಯ ಗಂಡ ತಮ್ಮ ಮಕ್ಕಳನ್ನು ಇಬಾದ್ ಮತ್ತು ಅರ್ಶದ್ ಗೆ ಮದುವೆ ಮಾಡಲು ಇಷ್ಟ ಇರಲಿಲ್ಲ, ಈ ಕಾರಣಕ್ಕೆ ಅಫನಾನ್, ಐನಾಜ್, ಇಬಾದ್ ಮತ್ತು ಅರ್ಶದ್ ನಡುವೆ ಭಿನ್ನಾಭಿಪ್ರಾಯ ಇತ್ತು ಎನ್ನುವುದು ಗೊತ್ತಿಲ್ಲ. ಹಸೀನಾರವರು ಲೇವಾದೇವಿ ವ್ಯವಹಾರ ಮಾಡುವುದು ಆಕೆಯ

ಗಂಡನಿಗೆ ಇಷ್ಟ ಇರಲಿಲ್ಲ ಮತ್ತು ಮಕ್ಕಳ ಮದುವೆ ವಿಚಾರದಲ್ಲೂ ಆತನಿಗೆ ಅಸಮಾಧಾನ ಇತ್ತು ಮತ್ತು ಈ ವಿಷಯ ನನಗೆ ಗೊತ್ತಿದೆ ಎಂದರೆ ಸರಿಯಲ್ಲ.

6. ಈ ಪ್ರಕರಣದ ಘಟನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ತಕ್ಷೀರು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಮೃತಪಟ್ಟವರು ನಮ್ಮ ನೆರೆ ಮನೆಯವರಾದ ಕಾರಣ ಅವರ ಕುಟುಂಬದವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರಿಗೆ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ತಕ್ಷೀರು ನಡೆದಿದೆ ಎನ್ನಲಾದ ಮನೆಯಿಂದ ನಮ್ಮ ಮನೆ ದೂರದಲ್ಲಿದ್ದು ಮತ್ತು ನಮಗೆ ಯಾವುದೇ ಚೀರಾಟದ ಶಬ್ದ ಕೇಳಿಲ್ಲ ಎಂದರೆ ಸರಿಯಲ್ಲ. ನಿಪಿ-60 ಮತ್ತು 61 ರಲ್ಲಿ ನಾನು ಕಂಡು ಬರುವುದಿಲ್ಲ, ಸಾಕ್ಷಿ ತನ್ನ ಗಂಡ ಇದ್ದಾರೆ ಎನ್ನುತ್ತಾರೆ. ಸದ್ರಿ ಭಾವ ಚಿತ್ರಗಳನ್ನು ದಿನಾಂಕ 13-11-2023 ರಂದು ತೆಗೆದಿರುತ್ತಾರೆ, ಅದನ್ನು ಯಾವ ಸಾಧನದಿಂದ ಯಾರು ತೆಗೆದಿರುತ್ತಾರೆ ಹೇಳಲು ಆಗುವುದಿಲ್ಲ. ಸದ್ರಿ ಛಾಯಾ ಚಿತ್ರಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.